ಸಾಕ್ಷಿಯ ಹೆಸರುಃ ಗುರುಪ್ರಸಾದ್

ದಿನಾಂಕಃ **22-06-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಡಿ ವಕೀಲರಿಂದಃ**

1) ನಮ್ಮ ಕುಟುಂಬದ ಮೂಲ ಪುರುಷ ಕಾಳೇಗೌಡ ಎಂದರೆ ಸರಿ. ಸದರೀ ಕಾಳೇಗೌಡರಿಗೆ ಮೂರು ಜನ ಮಕ್ಕಳಿದ್ದು ಅವರ ಹೆಸರು ದೇವರಾಜೇಗೌಡ, ರಾಜೇಗೌಡ ಮತ್ತು ಮಲ್ಲೇಶ್ ಎಂದರೆ ಸರಿ.ಅವರ ಪೈಕಿ ದೇವರಾಜೇಗೌಡ ಮತ್ತು ಮಲ್ಲೇಶ್ ತೀರಿಕೊಂಡಿರುತ್ತಾರೆ ಎಂದರೆ ಸರಿ. ಮಲ್ಲೇಶ್ ರವರಿಗೆ ಪ್ರೇಮ ಎಂಬ ಪತ್ನಿ ಇದ್ದರು ಎಂದರೆ ಸರಿ. ಸದರೀ ಪ್ರೇಮ ಮತ್ತು ಮಲ್ಲೇಶ್ ರವರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಅವರುಗಳು ಸುಕನ್ಯ, ಸುಧಾ ಮತ್ತು ನಾಗೇಶ್ ಎಂದರೆ ಸರಿ. ರಾಜೇಗೌಡರ ಹೆಂಡತಿ ಹೆಸರು ಪುಟ್ಟಮ್ಮ. ಸತೀಶ್ ಮತ್ತು ಗಿರೀಶ್ ರಾಜೇಗೌಡರ ಮಕ್ಕಳು ಎಂದರೆ ಸಾಕ್ಷಿ ಅವರಿಗೆ ಮೂರು ಜನ ಮಕ್ಕಳು ಎನ್ನುತ್ತಾರೆ.

2) ಸತೀಶ್ ಮತ್ತು ಗಿರೀಶ್ ರಾಜೇಗೌಡರ ಮಕ್ಕಳು. ಸಾಕ್ಷಿ ಮುಂದುವರೆದು ಆನಂದ್ ಎಂಬ ಇನ್ನೊಬ್ಬ ಮಗ ಇದ್ದರು ಎನ್ನುತ್ತಾರೆ. ದೇವರಾಜೇಗೌಡರಿಗೆ ಇಬ್ಬರು ಪತ್ನಿಯರು ಎಂದರೆ ಸರಿ. ಮೊದಲನೆಯವರು ಲಲಿತಮ್ಮ ಎರಡನೆಯವರು ಹೇಮಲತಾ. ಲಲಿತಮ್ಮ 1992 ರಲ್ಲಿ ತೀರಿಕೊಂಡಿರುತ್ತಾರೆ. ದೇವರಾಜೇಗೌಡರ ಮಗ ಆನಂದ್ ಈ ದಾವೆಯ ವಾದಿ ಎಂದರೆ ಸುಳ್ಳು. ದಾವಾ ಸ್ವತ್ತುಗಳೆಲ್ಲಾ ಮೂಲತಹ ಕಾಳೇಗೌಡರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲಾ ದೇವರಾಜೇಗೌಡ, ರಾಜೇಗೌಡ, ಮತ್ತು ಮಲ್ಲೇಶ್ ರವರಿಗೆ ಅವರ ತಂದೆ 1997 ರಲ್ಲಿ ಬರೆದ ವಿಲ್ ಮೂಲಕ ಬಂದಿರವ ಸ್ವತ್ತುಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರೊಂದಿಗೆ ಇನ್ನೊಬ್ಬರಾದ ಸತೀಶ್ ರವರಿಗೂ ಕೂಡ ಬಂದಿದೆ ಎನ್ನುತ್ತಾರೆ. ಕಾಳೇಗೌಡರು

ತೀರಿಕೊಂಡ ನಂತರ ದಾವಾ ಸ್ವತ್ತುಗಳ ಖಾತೆ ದೇವರಾಜೇಗೌಡ ಮತ್ತು ಮಲ್ಲೇಶ್ ರವರ ಹೆಸರಿಗೆ ಖಾತೆ ಆಗಿತ್ತು ಎಂದರೆ ಸಾಕ್ಷಿ ಮೂರು ಜನರ ಹೆಸರಿಗೆ ಖಾತೆ ಆಗಿತ್ತು ಎನ್ನುತ್ತಾರೆ. ವಿಲ್ ಪ್ರಕಾರ ಮೂರು ಜನರ ಹೆಸರಿಗೆ ಖಾತೆ ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರತ್ತೇನೆ. ವಿಲ್ ಪ್ರಕಾರ ದೇವರಾಜೇಗೌಡ ಮತ್ತು ಮಲ್ಲೇಶ್ ರವರಿಗೆ ಮಾತ್ರ ಖಾತೆ ಆಗಿತ್ತು ಎಂದರೆ ಸರಿಯಲ್ಲ.

3) 2018 ರಲ್ಲಿ ರಾಜೇಗೌಡ ವಿಲ್ ಮೂಲಕ ತಮ್ಮ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ನಾವು ಹಾಜರುಪಡಿಸಿದ ಪಹಣಿ ಪತ್ರಿಕೆಗಳಲ್ಲಿ ಕಲಂ ನಂ. 10 ರಲ್ಲಿ ಖಾತಾ ಬದಲಾವಣೆ ವಿಭಜನೆ ಎಂದು ನಮೂದಿಸಿದೆ ಎಂದರೆ ಸಾಕ್ಷಿ ನಮ್ಮ ತಂದೆ ತೀರಿಕೊಂಡ ನಂತರ ನಾನು ಮತ್ತು ನನ್ನ ತಾಯಿ ಈ ರೀತಿ ಖಾತೆ ಮಾಡಿಸಿಕೊಂಡಿರುತ್ತೇವೆ ಎನ್ನುತ್ತಾರೆ. 2010–11 ರಲ್ಲಿ ಈ ರೀತಿ ಖಾತೆ ಮಾಡಿಸಿಕೊಂಡಿರುತ್ತೇವೆ. ಪೌತಿ ಖಾತೆ ಬದಲಾವಣೆ ಮಾಡಿಕೊಳ್ಳುವಾಗ ಕುಟುಂಬದ ವಂಶವೃಕ್ಷವನ್ನು ನೀಡಿ ಖಾತೆ ಮಾಡಿಸಿಕೊಳ್ಳಬೇಕಾಗಿದ್ದು ಆದರೆ, ನಾವು ವಾದಿಯನ್ನು ಹೊರತುಪಡಿಸಿ ಕಂದಾಯ ಅಧಿಕಾರಿಗಳೊಂದಿಗೆ ಷಾಮೀಲಾಗಿ ವಿಭಜನೆ ಎಂದು ಸುಳ್ಳು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

4) ನಾನು ಇಂಜಿನಿಯರಿಂಗ್ ಪದವಿ ಓದುತ್ತಿದ್ದೇನೆ. ನನ್ನ ತಂದೆ ವಯಸ್ಕರ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಸಾಕಷ್ಟು ತಿಳುವಳಿಕೆ ಇದ್ದು ಜ್ಞಾನವಂತರಾಗಿದ್ದರು ಎಂದರೆ ಸರಿ. ಅದೇ ರೀತಿ ನಾನು ಇಂಜಿನಿಯರಿಂಗ್ ವಿದ್ಯಾರ್ಥಿ ಆಗಿರುವುದರಿಂದ ನನಗೂ ಕೂಡ ಸಾಕಷ್ಟು ಬುದ್ಧಿ ಮತ್ತು ಜ್ಞಾನ ಇದೆ ಎಂದರೆ ಸರಿ. ನನ್ನ ತಂದೆಯ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯ ಜೆರಾಕ್ಸ್ ಪ್ರತಿಯನ್ನು ತೋರಿಸಿ ಅದರಲ್ಲಿರುವ ಒಂದು ಸಹಿಯನ್ನು ತೋರಿಸಿ ಇದು ಯಾರ ಸಹಿ ಎಂದು ಕೇಳಿದಾಗ ಸಾಕ್ಷಿ ಅದು ತಮ್ಮ ತಂದೆಯ ಸಹಿ ಎಂದು

ಗುರುತಿಸಿರುತ್ತಾರೆ. ಸದರೀ ದಾಖಲೆ 1 ನೇ ಪ್ರತಿವಾದಿಗೆ ಅವರ ತಂದೆ ದೇವರಾಜೇಗೌಡರು ಬರೆದುಕೊಟ್ಟ ವಿಲ್ ನ ಮರಣ ಶಾಸನ ಪತ್ರವಾಗಿರುತ್ತದೆ. ಸದರೀ ದಾಖಲೆಯನ್ನು ಈಗ ನಿಪಿ 14 ಎಂದು ಗುರುತಿಸಲಾಯಿತು.

5) ನನ್ನ ಎಲ್ಲಾ ಶಾಲಾ ದಾಖಲೆಗಳಲ್ಲಿ ನನ್ನ ತಂದೆ ಹೆಸರು ದೇವರಾಜೇಗೌಡ ಎಂದು ದಾಖಲಾಗಿದೆ ಎಂದರೆ ಸರಿ. ದಾಖಲೆಗಳಲ್ಲಿ ತಂದೆ ಇದ್ದರೆ ಮಾತ್ರ ತಂದೆ ಹೆಸರನ್ನು ದಾಖಲೆ ಮಾಡುತ್ತಾರೆ ಎಂದರೆ ಸರಿ. ಒಂದು ವೇಳೆ ಪೋಷಕರು ಇದ್ದರೆ ಪೋಷಕರ ಹೆಸರನ್ನು ನಮೂದಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಹಾರ್ಡ್ವಿಕ್ ಹೈಯರ್ ಪ್ರೈಮರಿ ಶಾಲೆ ಮೈಸೂರಿನ ಶಾಲಾ ದಾಖಲೆ ಅರ್ಜಿಯನ್ನು ತೋರಿಸಿ ಸದರೀ ಅರ್ಜಿಯಲ್ಲಿ ವಿದ್ಯಾರ್ಥಿ ಹೆಸರು ಆನಂದ್ ಎಂದು ಇದ್ದು ತಂದೆ ಹೆಸರು ಹೆಚ್ ಕೆ ದೇವರಾಜೇಗೌಡ ಎಂದು ನಮೂದಿಸಿದೆ ಎಂದು ತೋರಿಸಿದಾಗ ಸಾಕ್ಷಿ ಆ ರೀತಿ ನಮೂದಿಸಿ ಆದರೆ ಅದು ಅವರ ತಂದೆ ಅಲ್ಲ ಎನ್ನುತ್ತಾರೆ. ವಾದಿ ನಮ್ಮ ತಂದೆ ಹೆಸರನ್ನು ಬಳಕೆ ಮಾಡಿಕೊಂಡು ಸದರೀ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತಾರೆ. ನಿಪಿ 14 ಮತ್ತು ಈ ಶಾಲಾ ದಾಖಲು ಅರ್ಜಿಯಲ್ಲಿರುವ ಸಹಿಗಳನ್ನು ಬೆರಳಚ್ಚು ತಜ್ಞರಿಗೆ ಪರೀಕ್ಷೆಗೆ ಕಳುಹಿಸಿಕೊಡಲು ನನ್ನದೇನೂ ಅಭ್ಯಂತರ ಇಲ್ಲ.

6) ನಮಗೆ ದಾಖಲಾತಿಗಳನ್ನು ಕೊಟ್ಟ ಮೇಲೆ ಅಂದರೆ, ವಾದಿ ಪರ ವಕೀಲರು ಹಾಜರು ಮಾಡಿದ ನಂತರ ನಮಗೆ ವಾದಿ ಈ ದಾಖಲೆಗಳನ್ನು ಸೃಷ್ಟಿಸಿರುವ ವಿಚಾರ ಗೊತ್ತಾಗಿರುತ್ತದೆ. ಈ ವಿಷಯ ಗೊತ್ತಾದ ನಂತರ ಪೋಲೀಸರಿಗೆ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ತಹಸೀಲ್ದಾರ್ ರವರಿಗೆ ಚುನಾವಣಾ ಗುರುತಿನ ಚೀಟಿ ನಲ್ಲಿ ನಮ್ಮ ತಂದೆ ಹೆಸರನ್ನು ಸೇರಿಸಿದ್ದಕ್ಕೆ ದೂರು ಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ತಹಸೀಲ್ದಾರ್ ರವರು ನಾವು ಕೊಟ್ಟ ದೂರಿನ ಮೇಲೆ ಯಾವ ಕ್ರಮ

ಕೈಗೊಂಡಿದ್ದಾರೆ ಎಂದರೆ ಸಾಕ್ಷಿ ತಹಸೀಲ್ದಾರ್ ರವರು ಚುನಾವಣಾ ಗುರುತಿನ ಚೀಟಿಯಲ್ಲಿ ನಮೂದಾಗಿಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎನ್ನುತ್ತಾರೆ.

7) ಆನಂದ್ ರವರು ಚುನಾವಣಾ ಗುರುತಿನ ಚೀಟಿಯ ಸಂಖ್ಯೆಸಿ ವೈ ಹೆಚ್ 1 353259 ಎಂದರೆ ಸುಳ್ಳು. ಇದು ಆನಂದ್ ರವರ ಸೃಷ್ಟಿಸಿಕೊಂಡ ದಾಖಲೆ ಎದು ತಹಸೀಲ್ದಾರ್ ಮತ್ತು ಚುನಾವಣಾಧಿಕಾರಿಗಳಿಗೆ ದೂರನ್ನು ಕೊಟ್ಟಿರುತ್ತೇನೆ. 2001 ರಿಂದ ಇಂದಿನವರೆಗೂ ವಾದಿ ಈ ಗುರುತಿನ ಚೀಟಿನ ಆಧಾರದ ಮೇಲೆ ಮತದಾನ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಅವರು ಮತದಾನ ಮಾಡಲು ಪ್ರಾರಂಭ ಮಾಡಿದಾಗಿನಿಂದ ಇಲ್ಲಿಯವರೆಗೂ ಅವರ ತಂದೆ ಹೆಸರು ದೇವರಾಜೇಗೌಡ ಎಂದೇ ನಮೂದಾಗಿದೆ ಎಂದರೆ ಸುಳ್ಳು. ವಾದಿ ನಮ್ಮ ತಂದೆ ಹೆಸರನ್ನು ಬಳಸಿಕೊಂಡು ಈ ರೀತಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ನಾನು ವಾದಿಯನ್ನು ಸುಮಾರು 15-20 ವರ್ಷಗಳಿಂದ ನೋಡುತ್ತಿದ್ದೇನೆ. ಆತ ನನ್ನ ಚಿಕ್ಕಪ್ಪನ ಮಗ. ಅವರು ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ಅವರು ಏನು ಓದಿದ್ದಾರೆ ಹಾಗೂ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಎಲ್ಲಿ ಓದಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

8) ನನ್ನ ತಂದೆ ಬದುಕಿದ್ದಾಗ ಮೈಸೂರಿನ ರಾಮಕೃಷ್ಣನಗರದಲ್ಲಿ ವಾಸವಾಗಿದ್ದರು. ವಾದಿ 1 ನೇ ತರಗತಿಯಿಂದ ಪಿಯುಸಿ ವರೆಗೆ ಓದಿದ ಎಲ್ಲಾ ಶಾಲಾ ದಾಖಲೆಗಳಲ್ಲಿ ಅವರ ತಂದೆ ಹೆಸರು ದೇವರಾಜೇಗೌಡ ಎಂದು ಮತ್ತು ಅವರ ವಿಳಾಸ ರಾಮಕೃಷ್ಣನಗರ ಮೈಸೂರು ಎಂದು ನಮೂದಿಸಿದೆ ಎಂದರೆ ಸುಳ್ಳು. ವಾದಿ ನನ್ನ ತಂದೆ ಮತ್ತು ಲಲಿತಮ್ಮ ನವರ ಮಗನಾಗಿದ್ದರೂ ಸಹ ಅವರು ದೇವರಾಜೇಗೌಡರ ಮಗ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಮ್ಮ ತಂದೆ ಹೆಸರು ಮತ್ತು ವಿಳಾಸವನ್ನು ಪೋರ್ಜರಿ ಮಾಡಿಕೊಂಡಿರುತ್ತಾರೆ ಎಂದು ಅವರ ವಿರುದ್ಧ ದೂರನ್ನು ನೀಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲುঃ** ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.